
# ೬ ಸತ್ಸಂಗ

HYM6Q2



ಇಸ್ಮಾಯಿಲ್ ಬಹುದೊಡ್ಡ ವಿದ್ವಾಂಸ. ಸದಾಚಾರಿ ಹಕೀಮ. ಆತ ಮರಣ ಶಯ್ಯೆಯಲ್ಲಿದ್ದ. ಅವನ ಜೀವನದ ಅಂತಿಮ ಕ್ಷಣ ಸಮೀಪಿಸುತ್ತಿತ್ತು. ಆಗ ಇಸ್ಮಾಯಿಲ್‌ನು ತನ್ನ ಹತ್ತಿರವೇ ಶೋಕತಪ್ತನಾಗಿ ಕುಳಿತಿದ್ದ ತನ್ನ ಮಗ ಹುಸೇನನನ್ನು ಒಮ್ಮೆ ನೋಡಿದ. ಅವನನ್ನು ಪ್ರೀತಿಯಿಂದ ಮೈದಡವಿದ. ''ಮಗೂ! ಇಷ್ಟು ದಿನ ಸಮಯ ಸಿಕ್ಕಾಗಲೆಲ್ಲಾ ನಿನಗೆ ಅನೇಕ ನೀತಿ ವಿಷಯಗಳನ್ನು ಹೇಳುತ್ತಾ ಬಂದಿದ್ದೇನೆ. ನೀನು ಅದನ್ನು ತುಂಬ ಸಾವಧಾನಚಿತ್ತನಾಗಿ ಕೇಳಿ ಅದರಂತೆ ಜೀವನ ರೂಪಿಸಿಕೊಳ್ಳಲು ಪ್ರಯತ್ನ ನಡೆಸಿದ್ದೀಯೆ. ಈಗ ನನ್ನ ಕೊನೆಯ ಕ್ಷಣ ಬಂದಿದೆ. ನಿನಗೆ ಕೊನೆಯದಾಗಿ ಒಂದು ನೀತಿ ವಿಷಯ ಹೇಳುತ್ತೇನೆ. ಅದನ್ನು ಚೆನ್ನಾಗಿ ಗ್ರಹಿಸು'' ಎಂದನು.

ಹುಸೇನನು ಸುಮ್ಮನೆ ತಲೆಯಾಡಿಸಿದನು. ಅವನಿಗೆ ದುಃಖ ಒತ್ತರಿಸಿ ಬರುತ್ತಿತ್ತು. ''ಮಗೂ! ದೇವರ ಕೋಣೆಯಲ್ಲಿರುವ ಧೂಪ ಪಾತ್ರೆಯನ್ನು ತೆಗೆದುಕೊಂಡು ಬಾ ಎಂದು ಇಸ್ಮಾಯಿಲ್ ಹೇಳಿದನು. ಆಗ ಹುಸೇನನು ಧೂಪಪಾತ್ರೆಯನ್ನು ತಂದು ತಂದೆಯ ಮುಂದೆ ಹಿಡಿದನು. ಇಸ್ಮಾಯಿಲ್ ಭರಣಿ ತೆಗೆದು ಸ್ವಲ್ಪ ಶ್ರೀಗಂಧದ ಪುಡಿಯನ್ನು ಮಗನ ಅಂಗೈಯಲ್ಲಿಟ್ಟು ಆನಂತರ ಅಲ್ಲಿಯೇ ಇದ್ದ ಅಗ್ಗಿಷ್ಟಿಕೆಯಿಂದ ಒಂದು ಚೂರು ಇದ್ದಿಲು ತೆಗೆದು ಮಗನ ಇನ್ನೊಂದು ಕೈಯಲ್ಲಿಟ್ಟನು. ಹುಸೇನನು ಕುತೂಹಲದಿಂದ ತಂದೆಯ ಈ ಕೆಲಸವನ್ನು ನೋಡುತ್ತಿದ್ದ. ಅವನಿಗೆ ಏನೊಂದೂ ಅರ್ಥ ಆಗಲಿಲ್ಲ.

''ಮಗೂ! ಈಗ ಶ್ರೀಗಂಧದ ಪುಡಿ ಮತ್ತು ಇದ್ದಿಲುಗಳನ್ನು ಅವುಗಳು ಇದ್ದ ಜಾಗದಲ್ಲಿಯೇ ಇಟ್ಟುಬಿಡು'' ಎಂದನು ಇಸ್ಮಾಯಿಲ್. ಹುಸೇನನು ಹಾಗೆಯೇ ಮಾಡಿದನು. ಶ್ರೀಗಂಧದ ಪುಡಿಯನ್ನು ಹಿಡಿದಿದ್ದ ಕೈಯಲ್ಲಿ ಅದರ ಸುವಾಸನೆ ಬರುತ್ತಿತ್ತು. ಇದ್ದಿಲು ಹಿಡಿದಿದ್ದ ಕೈಯಲ್ಲಿ ಸುವಾಸನೆ ಇರಲ್ಲಿಲ್ಲ. ಇದ್ದಲಿನ ಮಸಿ ಮಾತ್ರ ಹಾಗೆಯೇ ಅಂಗೈಯಲ್ಲಿ ಉಳಿದಿತ್ತು.

ಇಸ್ಮಾಯಿಲ್ ಮಗನ ಕೈ ನೋಡುತ್ತಾ ಹೇಳಿದ, ''ಮಗೂ! ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ. ಸತ್ಸಂಗ ಚಂದನದಂತೆ. ಸಜ್ಜನರು, ಸಾಧು-ಸಂತರು, ಮಹಾತ್ಮರು ನಮ್ಮ ಜೊತೆಯಲ್ಲಿ ಇರುವವರೆಗೂ ಅವರಿಂದ ನಮಗೆ

ಒಳಿತಾಗುತ್ತದೆ. ಅವರು ನಮ್ಮಿಂದ ದೂರ ಹೋದರೂ ಅವರ ಸಹವಾಸದ ಸುಖ ಸದಾ ನಮ್ಮೊಂದಿಗಿರುತ್ತದೆ. ಸುಖದ ಕ್ಷಣಗಳು ಸದಾ ಸಿಹಿಯಾಗಿರುತ್ತವೆ. ಆನಂದದಾಯಕವಾಗಿರುತ್ತವೆ. ದುರ್ಜನರು ಇದ್ದಲಿ ಇದ್ದಂತೆ. ಅವರು ನಮ್ಮ ಜೊತೆ ಇದ್ದಾಗಲೂ ಅಥವಾ ದೂರ ಹೋದಾಗಲೂ ಅವರ ಸಹವಾಸದ ದುಃಖ ನಮ್ಮನ್ನು ಕಾಡುತ್ತದೆ. ಜೀವನದಲ್ಲಿ ಅಶಾಂತಿ ತುಂಬಿ ನೆಮ್ಮದಿ ಹಾಳಾಗುತ್ತದೆ. ನಾವು ಶ್ರೀಗಂಧದ ಸಹವಾಸ ಮಾಡಬೇಕೇ ಹೊರತು ಇದ್ದಿಲಿನ ಸಹವಾಸ ಮಾಡಬಾರದು. ಸಜ್ಜನರಿಂದ ನಮ್ಮ ಗೌರವ ಇಮ್ಮಡಿಸುತ್ತದೆ. ದುರ್ಜನರಿಂದ ನಮ್ಮ ಗೌರವ ಕ್ಷೀಣಿಸುತ್ತದೆ. ಆದ್ದರಿಂದ ನೀನು ಸದಾ ಸಜ್ಜನರ ಸಹವಾಸ ಮಾಡು. ದುಷ್ಟರಿಂದ ದೂರವಿರು'' ಇಸ್ಮಾಯಿಲ್ ನೀತಿ ಸಂಹಿತೆಯನ್ನು ಮಗನಿಗೆ ಪರಿಚಯಿಸಿದ.

ತಂದೆಯ ಸಾಂಕೇತಿಕ ಉಪದೇಶಗಳು ಹುಸೇನನಿಗೆ ಸಂತೋಷವನ್ನುಂಟು ಮಾಡಿದವು. ತಂದೆಯ ಬಗ್ಗೆ ಅವನ ಹೃದಯದಲ್ಲಿ ಅಪಾರ ಕೃತಜ್ಞತೆಯಿತ್ತು. ಅವನು ತನ್ನ ಜೀವನದುದ್ದಕ್ಕೂ ತಂದೆಯ ಮಾತುಗಳನ್ನು ನೆನಪಿಟ್ಟುಕೊಂಡು ಅದರಂತೆಯೇ ನಡೆದನು.

– ಎಂ. ವಿ. ನಾಗರಾಜರಾವ್

**ಶಬ್ದಗಳ ಅರ್ಥ**

ಹಕೀಮ – ವೈದ್ಯ; ಅಂತಿಮ – ಕೊನೆ; ಶೋಕತಪ್ತ – ದುಃಖ; ಸತ್ಸಂಗ – ಒಳ್ಳೆಯವರ ಸಂಗ.

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

**ವಿದ್ವಾಂಸ __________ ; ಗ್ರಹಿಸು __________**

**ವಿರುದ್ಧಾರ್ಥಕ ಪದಗಳು**

| | | |
|---|---|---|
| ಜನನ X ಮರಣ; | ಸುಖ X ದು:ಖ; | ಸಜ್ಜನ X ದುರ್ಜನ; |
| ಒಳಿತು X ಕೆಡಕು; | ಸಿಹಿ X ಕಹಿ; | ಶಾಂತಿ X ಅಶಾಂತಿ; |
| ಕೃತಜ್ಞ X ಕೃತಘ್ನ | | |

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಇಸ್ಮಾಯಿಲ್ ಯಾರು ?

__________

ಆ) ಶೋಕತಪ್ತನಾಗಿ ಕುಳಿತ ಮಗನಿಗೆ ಇಸ್ಮಾಯಿಲ್ ಏನು ಹೇಳಿದನು ?

__________

ಇ) ಇದ್ದಿಲು ಹಿಡಿದ ಕೈಯಲ್ಲಿ ಏನು ಕಂಡುಬಂದಿತು ?

__________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** __________

**ಉತ್ತರ** __________

**ಆ)** __________

**ಉತ್ತರ** __________

**ಪ್ರಶ್ನೆ ೩) ಬಿಟ್ಟ ಸ್ಥಳ ತುಂಬಿರಿ.**

ಅ) ಅವನ ಜೀವನದ ................. ಸಮೀಪಿಸುತ್ತಿತ್ತು.

ಆ) ................. ಒಂದು ಚೂರು ಇದ್ದಿಲು ತೆಗೆದು ಮಗನ ಇನ್ನೊಂದು ಕೈಯಲ್ಲಿಟ್ಟ.

ಇ) ಸಜ್ಜನರ ಸಹವಾಸ ................. ಸವಿದಂತೆ.

ಈ) ನಮ್ಮ ಗೌರವ ................. ಇಮ್ಮಡಿಸುತ್ತದೆ.

ಉ) ತಂದೆಯ ಬಗ್ಗೆ ಅವನ ಹೃದಯದಲ್ಲಿ ಅಪಾರ .................

**ಪ್ರಶ್ನೆ ೪) ಗೆರೆ ಹೊಡೆದ ಕೆಳಗಿನ ಶಬ್ದಗಳಲಿಯ ಲಿಂಗಗಳನ್ನು ಗುರುತಿಸಿರಿ.**

ಅ) ಕಾವೇರಿ ನದಿಯು ರಭಸವಾಗಿ ಹರಿಯುತ್ತದೆ. [ ]

ಆ) ರಾಜು ಮತ್ತು ಗೀತಾ ಆಟ ಅಡುವರು. [ ]

ಇ) ಮೇಜಿನ ಮೇಲೆ ಪುಸ್ತಕವಿದೆ. [ ]

**ಉಪಕ್ರಮ :** ಸಾಧು-ಸಂತರ ಭಾವಚಿತ್ರಗಳನ್ನು ಸಂಗ್ರಹಿಸಿ ಅವರ ಜೀವನದ ಬಗ್ಗೆ ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

# ಅಲ್ಪರಸಂಗ ಅಭಿಮಾನ ಭಂಗ

**ವ್ಯಾಕರಣ :**

**ವಚನ**

ಸಂಖ್ಯೆ - ವಸ್ತು ಅಥವಾ ವ್ಯಕ್ತಿಗಳ ಸಂಖ್ಯೆಯನ್ನು ತಿಳಿಸುವುದೇ ವಚನವೆನಿಸುವುದು. ವಚನಗಳಲ್ಲಿ ಎರಡು ಪ್ರಕಾರಗಳು - ಏಕವಚನ ಮತ್ತು ಬಹುವಚನ.

೧) **ಏಕವಚನ :** ವ್ಯಕ್ತಿ ಅಥವಾ ವಸ್ತುವಿನ ಸಂಖ್ಯೆಯು ಒಂದೇ ಆಗಿದ್ದರೆ **ಏಕವಚನವೆ**ನಿಸುವುದು.
ಉದಾ : ಹಣ್ಣು, ಹುಡುಗ, ಮರ, ಮಗ, ಕಾಯಿ, ಅಣ್ಣ, ಅಕ್ಕ, ಹುಡುಗಿ ಇತ್ಯಾದಿ.

೨) **ಬಹುವಚನ :** ವ್ಯಕ್ತಿ ಅಥವಾ ವಸ್ತುವಿನ ಸಂಖ್ಯೆಯು ಒಂದಕ್ಕಿಂತಲೂ ಹೆಚ್ಚಾಗಿದ್ದರೆ **ಬಹುವಚನವೆ**ನಿಸುವುದು.
ಉದಾ : ಹಣ್ಣುಗಳು, ಹುಡುಗರು, ಮರಗಳು, ಕಾಯಿಗಳು, ಇತ್ಯಾದಿ.

